# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 168 | Pages. 2 | Date: 09-05-2025, FRIDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 168 - ಪುಟಗಳು : 2 - 09 ಮೇ 2025 ಶುಕ್ರವಾರ Ph: 8762954248 ದರ : ₹1

# ಪಾಕಿಸ್ತಾನ ದಾಳಿ ಭೀತಿ: ಜಿಲ್ಲೆಯಲ್ಲೂ ಹೈ ಅಲರ್ಟ್

## ಹೇಮಾವತಿ, ಹಾರಂಗಿ, ಯಗಚಿ ಡ್ಯಾಂಗೆ ಭದ್ರತೆ : ಪ್ರವಾಸಿಗರ ಸೂಕ್ಷ್ಮ ತಪಾಸಣೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಪಾಕಿಸ್ತಾನದ ಒಂಬತ್ತು ಉಗ್ರರ ಶಿಬಿರಗಳ ಮೇಲೆ ಭಾರತ ಕ್ಷಿಪಣಿ ದಾಳಿ ನಡೆಸಿದ ಬೆನ್ನಲ್ಲೇ ಪಾಕಿಸ್ತಾನದಿಂದಲೂ ದಾಳಿ ಎದುರಾಗುವ ಸಾಧ್ಯತೆಯಿದ್ದು ಜಿಲ್ಲೆಯಲ್ಲೂ ಕಟ್ಟೆಚ್ಚರ ವಹಿಸಲಾಗಿದೆ.

ಗೊರೂರು ಹೇಮಾವತಿ ಜಲಾಶಯ, ಹಾರಂಗಿ ಹಾಗು ಯಗಚಿ ಜಲಾಶಯ, ಎಂಸಿಎಫ್‌ಗೆ ಹೆಚ್ಚಿನ ಭದ್ರತೆ ಕೈಗೊಳ್ಳಲಾಗಿದೆ.

ರಾಜ್ಯದಲ್ಲಿರುವ ಅಣೆಕಟ್ಟುಗಳಿಗೆ ಹೆಚ್ಚಿನ ಭದ್ರತೆ ಒದಗಿಸುವಂತೆ ಗೃಹ ಸಚಿವಾಲಯ ಹಾಗೂ ರಾಜ್ಯ ಸರ್ಕಾರದಿಂದ ಸೂಚನೆ ಬಂದ ಹಿನ್ನೆಲೆಯಲ್ಲಿ ಪೊಲೀಸ್ ಬಿಗಿ ಭದ್ರತೆ ಹಾಕಲಾಗಿದೆ.

ಕೈಗಾರಿಕಾ ಭದ್ರತೆ ಪಡೆಯ 22 ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದು, ಓರ್ವ ಸಿಪಿಐ, ಓರ್ವ ಎಸ್‌ಐ, ನಾಲ್ವರು ಎಎಸ್‌ಐ ಹಾಗೂ ಹದಿನಾರು ಮಂದಿ ಕಾನ್ಸ್‌ಟೇಬಲ್‌ಗಳ ನಿಯೋಜನೆ ಮಾಡಲಾಗಿದೆ.

ಗೊರೂರು ಜಲಾಶಯದ ಕ್ರಸ್ಟ್ ಗೇಟ್‌ಗಳ ಬಳಿ ಜಲಾಶಯ ನೋಡಲು ಬರುವ ಪ್ರವಾಸಿಗರನ್ನು ಮೆಟಲ್ ಡಿಟೆಕ್ಟರ್ ಮೂಲಕ ತಪಾಸಣೆ ಮಾಡಿ ಹೆಸರು, ವಿಳಾಸ, ಫೋನ್ ನಂಬರ್ ಪಡೆಯಲಾಗುತ್ತಿದ್ದು, ವಾಹನಗಳನ್ನು ಅಂಡರ್ ವೆಹಿಕಲ್ ಸರ್ಚಿಂಗ್ ಮಿರರ್ ಮೂಲಕ ಪರಿಶೀಲನೆ ಮಾಡಲಾಗುತ್ತಿದೆ. ಏರ್‌ಸ್ಟ್ರೈಕ್, ಡ್ರೋನ್ ಮೂಲಕ ಅಟ್ಯಾಕ್ ಆಗುವ ಸಾಧ್ಯತೆ ಇದೆ ಎಂದು ಐಎಸ್‌ಡಿ ವಿಭಾಗದ ಡಿಜಿ ಸೂಚನೆ ನೀಡಿದ್ದು, ಆ ಸಂದರ್ಭದಲ್ಲಿ ತೆಗೆದುಕೊಳ್ಳುವ ತುರ್ತು ಕ್ರಮಗಳ ಬಗ್ಗೆ ಕೈಗಾರಿಕಾ ಭದ್ರತಾ ಪಡೆಯ ಇನ್ಸ್‌ಪೆಕ್ಟರ್ ಆನಂದ್ ಈಗಾಗಲೇ ಮಾಹಿತಿ (ಡೆಮೋ) ನೀಡಿದ್ದು, ಗೊರೂರು ಹೇಮಾವತಿ ಜಲಾಶಯದ ಬಳಿ ತೀವ್ರ ನಿಗಾ ವಹಿಸಲಾಗಿದೆ.

ಉಪಗ್ರಹಗಳ ನಿಯಂತ್ರಿಸುವ ಜವಾಬ್ದಾರಿ ಹೊತ್ತಿರುವ ನಗರ ಹೊರವಲಯದಲ್ಲಿರುವ ಇಸ್ರೋದ ಮಾಸ್ಟರ್ ಕಂಟ್ರೋಲ್ ಫೆಸಿಲಿಟಿ (ಎಂಸಿಎಫ್)ಗೆ ಎಂದಿಗಿಂತ ಹೆಚ್ಚಿನ ಭದ್ರತೆ ಒದಗಿಸಲಾಗಿದೆ. ಕೇಂದ್ರ ಮೀಸಲು ಪಡೆಗಳ ಹೆಚ್ಚಿನ ಸಿಬ್ಬಂದಿ ನಿಯೋಜನೆಗೊಳಿಸಿ ಹೆಚ್ಚಿನ ನಿಗಾ ವಹಿಸಲಾಗಿದೆ. ಎಂಸಿಎಫ್ ವ್ಯಾಪ್ತಿಯ ಮೂಲೆ ಮೂಲೆಯಲ್ಲೂ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಏರ್‌ಸ್ಟ್ರೈಕ್ ಮತ್ತು ಡ್ರೋನ್ ದಾಳಿಯ ಬಗ್ಗೆಯೂ ಹೆಚ್ಚಿನ ಎಚ್ಚರಿಕೆ ವಹಿಸಿ ಕಾರ್ಯ ನಿರ್ವಹಿಸಲಾಗುತ್ತಿದೆ.

## ಲೀವ್ ಕ್ಯಾನ್ಸಲ್!

ಭಾರತ-ಪಾಕಿಸ್ತಾನ ನಡುವೆ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ ಪೊಲೀಸ್ ಇಲಾಖೆಯ ವಿವಿಧ ಪಡೆಗಳ ಸಿಬ್ಬಂದಿ, ಅಧಿಕಾರಿಗಳಿಗೆ ರಜೆ ಕಡಿತಗೊಳಿಸಿ ಕೇಂದ್ರ ಸ್ಥಳಬಿಟ್ಟು ತೆರಳುವಂತಿಲ್ಲ ಎಂದು ಆದೇಶಿಸಲಾಗಿದೆ.

ನಾಗರಿಕರ ಭದ್ರತೆಗೆಗಾಗಿ ಕೆಎಸ್‌ಆರ್‌ಪಿ ಮೀಸಲು ಪಡೆಯನ್ನು ಸಜ್ಜುಗೊಳಿಸಾಗಿದೆ. ಪೊಲೀಸ್ ಇಲಾಖೆಯೊಂದಿಗೆ ಅಗ್ನಿಶಾಮಕ ದಳದ ಅಧಿಕಾರಿಗಳು ಕೂಡ ಹೈಅಲರ್ಟ್ ಆಗಿದ್ದಾರೆ.

ಈ ಬಗ್ಗೆ ಪತ್ರಿಕೆಯೊಂದಿಗೆ ಮಾತನಾಡಿದ ಕೈಗಾರಿಕಾ ಭದ್ರತೆ ಪಡೆ ಸಿಪಿಐ ಆನಂದ್, ಗೊರೂರು ಹೇಮಾವತಿ ಜಲಾಶಯಕ್ಕೆ ಬುಧವಾರದಿಂದಲೇ ಕೈಗಾರಿಕಾ ಭದ್ರತೆ ಪಡೆಯಿಂದ ಭದ್ರತೆ ಒದಗಿಸಲಾಗಿದೆ. ಒಟ್ಟು 22 ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದರಲ್ಲಿ ಒಬ್ಬ ಸಿಪಿಐ, ಒಬ್ಬ ಎಸ್‌ಐ, ನಾಲ್ಕು ಎಎಸ್‌ಐ ಹಾಗೂ 13 ಕಾನ್ಸ್‌ಟೇಬಲ್‌ಗಳನ್ನು ನಿಯೋಜನೆ ಮಾಡಲಾಗಿದೆ. ಯಗಚಿ ಜಲಾಶಯಕ್ಕೂ ಕೈಗಾರಿಕಾ ಭದ್ರತೆ ಪಡೆಯ ಬೇರೊಂದು ತುಕಡಿ ನಿಯೋಜಿಸಲಾಗಿದೆನ ಎಂದರು.

# ವಿಶ್ವಕರ್ಮ ಸಮಾಜ ಜಿಲ್ಲಾಧ್ಯಕ್ಷರಾಗಿ ಹರೀಶ್



ಹಾಸನ: ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷರಾಗಿ ಹೆಚ್.ವಿ. ಹರೀಶ್ ಅವರು ಆಯ್ಕೆಯಾಗಿದ್ದಾರೆ.

ನಗರದ ಶ್ರೀ ಕಾಳಿಕಾಂಬ ದೇವಾಲಯದಲ್ಲಿ ನಡೆದ ಸಭೆಯಲ್ಲಿ ಪ್ರಭಾರ ಅಧ್ಯಕ್ಷ ನಾರಾಯಣ್ ಅಧಿಕಾರ ಹಸ್ತಾಂತರಿಸಿದರು. ನೂತನ ಅಧ್ಯಕ್ಷ ಹೆಚ್.ವಿ. ಹರೀಶ್ ಅವರು ಮಾತನಾಡಿ, ಎಲ್ಲರ ಸಹಕಾರದಿಂದ ಸಮಾಜದ ಏಳಿಗೆಗೆ ಮತ್ತು ಸಂಘಟನೆಗೆ ಶ್ರಮವಹಿಸಿ ಕೆಲಸ ಮಾಡುತ್ತೇನೆ ಎಂದರು.

ಸಭೆಯಲ್ಲಿ ಮಾಜಿ ಅಧ್ಯಕ್ಷ ಕುಮಾರ್, ಉಪಾಧ್ಯಕ್ಷ ಕೆ.ವಿ. ಯೋಗೇಶ, ಪ್ರಧಾನ ಕಾರ್ಯದರ್ಶಿ ರಾಘವೇಂದ್ರ, ಸಹ ಕಾರ್ಯದರ್ಶಿ ಪ್ರಸನ್ನಕುಮಾರ್, ತಾಲ್ಲೂಕು ಘಟಕಗಳ ಅಧ್ಯಕ್ಷರಾದ ಹೆಚ್.ಬಿ. ಕುಮಾರಚಾರ್, ಹೆಚ್. ಶ್ರೀನಿವಾಸ್, ಬಿ.ಹೆಚ್. ಗಂಗಾಧರಾಚಾರ್, ಎಂ.ಪಿ. ಹರೀಶ್ ಹಾಗೂ ಇತರರಿದ್ದರು.

## ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 ನೋಂದಣಿಗೆ ಕರೆ

ಹಾಸನ: ಎಸ್‌ಎಸ್‌ಎಲ್‌ಸಿ ಪರೀಕ್ಷೆ-1 ರಲ್ಲಿ ಉತ್ತೀರ್ಣರಾಗದ ವಿದ್ಯಾರ್ಥಿಗಳಿಗೆ ಪರೀಕ್ಷೆ-2 ಅನ್ನು ಮೇ 26 ರಿಂದ ಜೂ 2ರ ವರೆಗೆ ನಡೆಸಲಾಗುತ್ತದೆ. ಪ್ರಪ್ರಥಮ ಬಾರಿಗೆ ಪರೀಕ್ಷೆಗೆ ನೊಂದಣಿಯಾಗುವ ವಿದ್ಯಾರ್ಥಿಗಳಿಗೆ ಶುಲ್ಕ ಪಾವತಿಯಿಂದ ವಿನಾಯಿತಿ ನೀಡಲಾಗಿದೆ.

ಪರೀಕ್ಷೆಗೆ ನೋಂದಾಯಿಸಿಕೊಳ್ಳಲು ಮೇ 10 ಕಡೆಯ ದಿನವಾಗಿದೆ. ಉತ್ತೀರ್ಣರಾಗದ ಎಲ್ಲಾ ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಳ್ಳುವಂತೆ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಹೆಚ್.ಎಸ್. ಚಂದ್ರಶೇಖರ್ ತಿಳಿಸಿದ್ದಾರೆ.

# ಎಂಸಿಇಯಿಂದ ಮೆಡಿಕಲ್ ಕಾಲೇಜು: ಆರ್.ಟಿ. ದ್ಯಾವೇಗೌಡ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿಯಿಂದ ಮೆಡಿಕಲ್ ಕಾಲೇಜು ಆರಂಭಿಸಲು ಸಿದ್ಧತೆ ನಡೆಯುತ್ತಿದೆ ಎಂದು ಸಂಸ್ಥೆ ಅಧ್ಯಕ್ಷ ಆರ್.ಟಿ. ದ್ಯಾವೇಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಶ್ರೇಷ್ಠ ವ್ಯಕ್ತಿಗಳು ಮುನ್ನಡೆಸಿಕೊಂಡು ಬಂದ ಈ ಸಂಸ್ಥೆಯಲ್ಲಿ ನನಗೆ ಇಷ್ಟು ದೊಡ್ಡ ಹುದ್ದೆ ಸಿಗುತ್ತದೆ ಎಂಬ ನಿರೀಕ್ಷೆ ಇರಲಿಲ್ಲ. ಅನಿರೀಕ್ಷಿತವಾಗಿ ಬಂದಿರುವ ಅವಕಾಶವನ್ನು ದುರುಪಯೋಗ ಮಾಡಿಕೊಳ್ಳುವುದಿಲ್ಲ. ಉತ್ತಮ ಕೆಲಸಗಳ ಮೂಲಕ ಸಂಸ್ಥೆಯ ಕೀರ್ತಿ ಹೆಚ್ಚಿಸಬೇಕೆಂಬ ಉದ್ದೇಶದಿಂದ ಕೆಲಸ ಮಾಡುತ್ತಿದ್ದೇವೆ. ಸಂಸ್ಥೆಯಲ್ಲಿ ಅವ್ಯವಹಾರ ನಡೆಯುತ್ತಿದೆ ಎಂಬ ಸುಳ್ಳು ಸುದ್ದಿಗೆ ಕಿವಿಗೊಡಬೇಡಿ ಎಂದು ಮನವಿ ಮಾಡಿದರು.

ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ (ಎಂಟಿಇಎಸ್) ಕಳೆದ ನಾಲ್ಕು ತಿಂಗಳಿಂದ ಉತ್ತಮ ಕಾರ್ಯಗಳ ಮೂಲಕ ಸಂಸ್ಥೆಯನ್ನು ಸುಸ್ಥಿತಿಯಲ್ಲಿ ಮುಂದುವರೆಸುತ್ತಿದೆ. ಕೆಲವರು ಅಭಿವೃದ್ಧಿಗೆ ಅಡ್ಡಗಾಲಾಗುತ್ತಿದ್ದು ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ಹೇಳಿದರು.

ಈ ಹಿಂದಿನ ಆಡಳಿತ ಮಂಡಳಿಯ ತಪ್ಪು ನಿರ್ಧಾರಗಳಿಂದ ಸಂಸ್ಥೆಗೆ ನಷ್ಟವುಂಟಾಗಿತ್ತು. ಕೇಂದ್ರ ಸರ್ಕಾರದಿಂದ ತಾಂತ್ರಿಕ ಕಾಲೇಜು ಅಭಿವೃದ್ಧಿಗೆ 100 ಕೋಟಿ ರೂ. ಅನುದಾನ ಕೊಡಿಸುವುದಾಗಿ ಬೆಂಗಳೂರು ಮೂಲದ ವ್ಯಕ್ತಿಯೊಬ್ಬ 25 ಲಕ್ಷ ರೂ. ಪಡೆದಿದ್ದ. ನಾವು ಅಧಿಕಾರಕ್ಕೆ ಬಂದ ಬಳಿಕ ಆತನ ಪೂರ್ವಾಪರ ವಿಚಾರಿಸಿದಾಗ ಅದೆಲ್ಲ ಸುಳ್ಳು ಎಂಬುದು ಗೊತ್ತಾಯಿತು. ಆತನ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ 25 ಲಕ್ಷ ರೂ. ವಾಪಾಸ್ ಪಡೆದಿದ್ದೇವೆ. ಎಂಸಿಇಗೆ ಸೇರಿದ ಆಸ್ತಿ ರಕ್ಷಣೆಗೆ ಕ್ರಮ ವಹಿಸಲಾಗಿದೆ ಎಂದು ಹೇಳಿದರು.

ಸಂಸ್ಥೆ ಪ್ರಧಾನ ಕಾರ್ಯದರ್ಶಿ ಜಗದೀಶ್ ಚೌಡಹಳ್ಳಿ ಮಾತನಾಡಿ, 5 ಸಾವಿರ ವಿದ್ಯಾರ್ಥಿಗಳಿರುವ ಶಿಕ್ಷಣ ಸಂಸ್ಥೆ ಇದಾಗಿದೆ. 68 ವರ್ಷಗಳ ಇತಿಹಾಸದಲ್ಲಿ ಒಂದೇ ಕುಟುಂಬ ಆಡಳಿತ ನಡೆಸಿದೆ. ಕಳೆದ ನಾಲ್ಕು ತಿಂಗಳಿಂದ ಕುಟುಂಬದ ಹಿಡಿತದಿಂದ ಸಂಸ್ಥೆ ಪಾರಾಗಿ ವ್ಯವಸ್ಥಿತ ಆಡಳಿತ ನಡೆಸುತ್ತಿದೆ. ಕೆಲವರು ಇದನ್ನು ಸಹಿಸದೆ ಆಧಾರ ರಹಿತ ಆರೋಪ ಮಾಡುತ್ತಿದ್ದಾರೆ. ಸಂಸ್ಥೆಗೆ ಸೇರಿದ ಜಾಗವನ್ನು ರಕ್ಷಿಸಿಕೊಳ್ಳಲಾಗಿದೆ. 120 ಕೋಟಿ ರೂ. ಮೌಲ್ಯದ ಆಸ್ತಿ ಹೊಂದಿರುವ ಎಂಸಿಇ ಮೇಲೆ ಹಲವರ ವಕ್ರದೃಷ್ಟಿ ಬೀಳುವುದು ಸಹಜ ಎಂದರು.

ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿಯಿಂದ ಮೆಡಿಕಲ್ ಕಾಲೇಜು ತೆರೆಯಬೇಕೆಂಬ ಯೋಜನೆ ಹಾಕಿಕೊಳ್ಳಲಾಗಿದೆ. ಕಟ್ಟಡ ಕಾಮಗಾರಿಗಾಗಿ ಆವರಣದಲ್ಲಿದ್ದ ನೀಲಗಿರಿ ಮರಗಳ ತೆರವು ಮಾಡಲಾಗಿದೆ. ಜೊತೆಗೆ ಆ ಮರಗಳಿಂದ ಕಾಂಪೌಂಡ್‌ಗೆ ಧಕ್ಕೆಯುಂಟಾಗುತ್ತಿತ್ತು ಎಂದು ಸ್ಪಷ್ಟಪಡಿಸಿದರು.

ಸಂಸ್ಥೆಯ ನಿರ್ದೇಶಕರಾದ ಬಿ.ಆರ್. ಗುರುದೇವ್, ದೇವರಾಜ್, ಶ್ರೀನಿವಾಸ್, ಸುರೇಶ್, ಆನಂದ, ರಿಜಿಸ್ಟ್ರಾರ್ ಪಾರ್ವತಮ್ಮ, ಪ್ರಾಂಶುಪಾಲ ಎ.ಜೆ. ಕೃಷ್ಣಯ್ಯ ಇದ್ದರು.

# ವಿದ್ಯಾರ್ಥಿ ಸ್ನೇಹಿ ಹಾಸ್ಟೆಲ್ ವಾತಾವರಣ ಅಗತ್ಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ ಪಡೆಯುವ ನಿಲಯಾರ್ಥಿಗಳಿಗೆ ಉತ್ತಮ ವಾತಾವರಣ ನಿರ್ಮಿಸಿಕೊಡುವಲ್ಲಿ ಸಿಬ್ಬಂದಿ ಪಾತ್ರ ಹೆಚ್ಚಿದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿಲಯ ಪಾಲಕರು, ಮೇಲ್ವಿಚಾರಕರು, ಕಿರಿಯ ನಿಲಯ ಮೇಲ್ವಿಚಾರಕರು, ಅಡುಗೆಯವರು, ಅಡುಗೆ ಸಹಾಯಕರಿಗೆ ನಗರದ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿರುವ ಮೂರು ದಿನಗಳ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಮಕ್ಕಳ ಊಟೋಪಚಾರ, ಸ್ವಚ್ಛತೆ, ಶಿಸ್ತು ಬಗ್ಗೆ ಯಾವುದೇ ರೀತಿಯ ಉದಾಸೀನತೆ ತೋರಿಸದೆ ಕರ್ತವ್ಯ ನಿರ್ವಹಿಸಬೇಕು. ನಿಲಯಗಳಲ್ಲಿ ಆಕಸ್ಮಿಕ ಅವಘಡ ಸಂಭವಿಸದ ಹಾಗೆ ಮುನ್ನೆಚ್ಚರಿಕೆ ವಹಿಸಬೇಕು. ಪ್ರತಿ ಹಂತಗಳಲ್ಲೂ ಈ ಬಗ್ಗೆ ಪರಿವೀಕ್ಷಣೆಯನ್ನು ಮುಂದಿನ ಹಂತದ ಅಧಿಕಾರಿಗಳು ಮಾಡಬೇಕು ಎಂದು ತಿಳಿಸಿದರು.

ಮೊದಲ ದಿನದ ತರಬೇತಿಯಲ್ಲಿ ವಿವಿಧ ವಿಷಯಗಳ ಕುರಿತು ಮಾಹಿತಿ ನೀಡಲು 6 ಅವಧಿಗಳನ್ನು ನಿಗದಿಪಡಿಸಲಾಗಿದ್ದು, ಮೊದಲ ಅವಧಿಯಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಕೆ.ಕೆ. ಮಂಜುಳ ಅವರು ಗುಣಮಟ್ಟದ ಆಹಾರ ಮತ್ತು ಪೌಷ್ಠಿಕ ಆಹಾರದ ಮಹತ್ವ ಮತ್ತು ಅವುಗಳನ್ನು ನಿಲಯದಲ್ಲಿ ವಿತರಿಸುವಲ್ಲಿ ಅಂತಹ ಪದಾರ್ಥಗಳನ್ನು ಬಳಸುವ ಕ್ರಮದ ಬಗ್ಗೆ ಹಾಗೂ ವೈಯಕ್ತಿಕ ಸ್ವಚ್ಛತೆ, ನಿಲಯದ ಸ್ವಚ್ಛತೆ, ಸಾಂಕ್ರಾಮಿಕ, ಅಸಾಂಕ್ರಾಮಿಕ ರೋಗಗಳು ಮತ್ತು ತಡೆಗಟ್ಟುವ ಕ್ರಮಗಳ ಬಗೆಗೆ ವಿವರಿಸಿದರು.

ಗುಣಮಟ್ಟದ ಆಹಾರ ಪದಾರ್ಥ ಸರಬರಾಜು ಶುಚಿ ಮತ್ತು ರುಚಿಯಾದ ಆಹಾರ ತಯಾರಿಕೆ ಮತ್ತು ವಿತರಣೆ ಹಾಗೂ ಕಲಬೆರಕೆ ಆಹಾರ ಪದಾರ್ಥಗಳನ್ನು ಗುರುತಿಸುವಿಕೆ ಮತ್ತು ಕಲಬೆರಕೆ ಪದಾರ್ಥ ಬಳಸುವುದರಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಆಹಾರ ಸುರಕ್ಷತಾ ಅಧಿಕಾರಿಗಳಾದ ಬಸವೇಗೌಡ ಮತ್ತು ವಿನಯ್ ಅವರು ವಿವರಿಸಿದರು.

ಅಡುಗೆ ತಯಾರಿಯಲ್ಲಿ ಆಹಾರ ಧಾನ್ಯಗಳ ಸಂಯೋಜನೆ ಬಗೆಗೆ ನಿಲಯ ಮೇಲ್ವಿಚಾರಕಿ ತ್ರಿವೇಣಿ ಮಾಹಿತಿ ನೀಡಿದರು.

ಅಗ್ನಿ ಶಾಮಕ ಅಧಿಕಾರಿ ಶಫೀಕ್ ಅಹಮ್ಮದ್, ಅಗ್ನಿ ಅವಘಡಗಳ ತಡೆಯುವಿಕೆ ಮತ್ತು ಸುರಕ್ಷತಾ ಕ್ರಮಗಳ ಬಗ್ಗೆ ವಿವರಿಸಿದರು.

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಎಂ. ಕುಮಾರ್, ಎಸ್.ಕೆ. ಪ್ರದೀಪ್, ಕೆ. ಹರೀಶ್, ರಾಜೇಶ್ ಚೌಹಾಣ್, ಆರ್. ಚಂದ್ರಶೇಖರ್ ಹಾಗೂ ಇತರರಿದ್ದರು.

# ಸೈನಿಕರಿಗೆ ಶಕ್ತಿ ಕೋರಿ ಪ್ರಾರ್ಥಿಸಿದ ಜಿಲ್ಲಾಧಿಕಾರಿ ಸತ್ಯಭಾಮ



ಹಾಸನ: ಆಪರೇಷನ್ ಸಿಂದೂರ ಯಶಸ್ಸಿನ ಹಿನ್ನಲೆಯಲ್ಲಿ ಭಾರತೀಯ ಸೇನೆ ಹಾಗೂ ಸೈನಿಕರಿಗಾಗಿ ಜಿಲ್ಲಾದ್ಯಂತ ಮುಜರಾಯಿ ದೇವಾಲಯಗಳಲ್ಲಿ ಸಂಕಲ್ಪ ಪೂಜೆ ನೆರವೇರಿಸಲಾಯಿತು.

ಪಾಕಿಸ್ತಾನದೊಂದಿಗೆ ನಡೆಯುತ್ತಿರುವ ಹೋರಾಟದಲ್ಲಿ ಭಾರತೀಯ ಸೈನಿಕರಿಗೆ ಜಯವಾಗಲಿ ಎಂದು ಪ್ರಾರ್ಥಿಸಿ ಜಿಲ್ಲಾಧಿಕಾರಿ ಸಿ. ಸತ್ಯಭಾಮ ಅವರು ನಗರದ ಚನ್ನಕೇಶವಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಜಿಲ್ಲಾಧಿಕಾರಿ ಜೊತೆಗೆ ತಹಶಿಲ್ದಾರ್ ಗೀತಾ, ಮುಜರಾಯಿ ತಹಶೀಲ್ದಾರ್ ಲತಾ ಪೂಜೆ ಸಲ್ಲಿಸುವ ಮೂಲಕ ನಾರಿ ಶಕ್ತಿ ಪ್ರದರ್ಶಿಸಿದರು.

ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಸಿ. ಸತ್ಯಭಾಮ ಅವರು, ಚನ್ನಕೇಶವ ಸ್ವಾಮಿ ಆಶೀರ್ವಾದ ನಮ್ಮ ಯೋಧರ ಮೇಲಿರಲಿ. ನಾವು ಒಳ್ಳೆಯ ಉದ್ದೇಶಕ್ಕಾಗಿ ಹೋರಾಡುತ್ತಿದ್ದೇವೆ. ನಮ್ಮ ಸೇನೆಗೆ ಜಯಸಿಗಲಿ ಎಂದು ಪ್ರಾರ್ಥಿಸಿ ಪೂಜೆ ಸಲ್ಲಿಸಲಾಗಿದೆ ಎಂದರು.



ಹಾಸನ: ಜಿಲ್ಲಾ ಕೇಂದ್ರ ಸಗಟು ಮಾರಾಟ ಸಂಸ್ಥೆ ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆಯಾದ ಶ್ರೀನಿವಾಸ್ ಭೀಮೇಗೌಡ ಅವರನ್ನು ಅಭಿನಂದಿಸಲಾಯಿತು. ಸಂಸ್ಥೆಯ ಅಧ್ಯಕ್ಷೆ ಅನುಸೂಯ ಪ್ರಕಾಶ್, ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕಮಲ್ ಕುಮಾರ್, ಉಪಾಧ್ಯಕ್ಷ ನಿತನ್ ಪಟೇಲ್, ಬೂವನಹಳ್ಳಿ ಪಿಎಸಿಸಿಎಸ್ ಅಧ್ಯಕ್ಷ ಬಿ.ಆರ್. ಬೊಮ್ಮೇಗೌಡ, ಉಪನ್ಯಾಸಕ ಪ್ರಕಾಶ್ ಮೇಗಳಕೇರಿ, ಸೋಮಶೇಖರ್ ಇತರರು ಹಾಜರಿದ್ದರು.

# ಚನ್ನರಾಯಪಟ್ಟಣ ತಹಶೀಲ್ದಾರ್ ವಿರುದ್ಧ ಕ್ರಮಕ್ಕೆ ಆಗ್ರಹ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಚನ್ನರಾಯಪಟ್ಟಣ ತಹಶೀಲ್ದಾರ್ ವಿ.ಎಸ್. ನವೀನ್ ಕುಮಾರ್ ಅವರು ವ್ಯಾಪಕ ಭ್ರಷ್ಟಾಚಾರದಲ್ಲಿ ತೊಡಗಿದ್ದು ಅವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ಕೂಡಲೇ ಅವರನ್ನು ಸೇವೆಯಿಂದ ಅಮಾನತು ಮಾಡಿ ತನಿಖೆ ನಡೆಸಬೇಕು. ಇಲ್ಲದಿದ್ದರೆ ಜಿಲ್ಲಾಧಿಕಾರಿ ಕಚೇರಿ ಎದುರು ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಚನ್ನರಾಯಪಟ್ಟಣ ತಾಲ್ಲೂಕಿನ 32 ಇಲಾಖೆಗಳಲ್ಲೂ ಭಷ್ಟಾಚಾರ ಮೀತಿ ಮೀರಿದೆ. ಇದರಿಂದ ರೈತರು, ಜನಸಾಮಾನ್ಯರು ನಲುಗಿಹೋಗಿದ್ದಾರೆ. ಭ್ರಷ್ಟಾಚಾರ ನಿಯಂತ್ರಣಕ್ಕೆ ತರಬೇಕು ಹಾಗೂ ಭ್ರಷ್ಟಾಚಾರ ಮುಕ್ತ ಪಾರದರ್ಶಕ ಆಡಳಿತ ನಡೆಸಬೇಕೆಂದು ತಹಶೀಲ್ದಾರ್ ಕಚೇರಿ ಎದುರು ಮೇ 2 ರಿಂದ ಅನಿರ್ದಿಷ್ಟಾವಧಿ ಧರಣಿ ನಡೆಸಲಾಗುತ್ತಿದೆ ಎಂದರು.

ಈ ಹೋರಾಟಕ್ಕೆ ಜಿಲ್ಲಾ ರೈತ, ಕಾರ್ಮಿಕ, ದಲಿತ, ಜನಪರ ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿವೆ. ಭ್ರಷ್ಟಾಚಾರಕ್ಕೆ ನಾಯಕತ್ವ ವಹಿಸಿರುವ ನವೀನ್ ಕುಮಾರ್ ಅವರನ್ನು ಕೂಡಲೇ ಸೇವೆಯಿಂದ ಅಮಾನತು ಮಾಡಲು, ರಾಜ್ಯ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ, ಸ್ಥಳೀಯ ಶಾಸಕರು, ಸಂಸದರು, ಉಸ್ತುವಾರಿ ಹಾಗೂ ಕಂದಾಯ ಸಚಿವರು, ಡಿಸಿ ಸೇರಿದಂತೆ ಅನೇಕರಿಗೆ ಮನವಿ ಮಾಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಶೆಟ್ಟಿಹಳ್ಳಿ ಗ್ರಾಮದ ಲಕ್ಷ್ಮಮ್ಮ ಕಸಬಾ ಹೋಬಳಿ 35 ಗುಂಟೆ ಜಮೀನಿನ ಸರ್ವೆ ಮಾಡಿ 194 ಹೊಸ ನಂಬರ್ ನೀಡಿದ್ದಾರೆ. ಇದರ ಇಂಡೀಕರಣ ಮಾಡಲು ಆ.2024 ರಂದು ತಹಶೀಲ್ದಾರ್‌ಗೆ ಸರ್ವೆಯವರು ನೀಡಿದ್ದಾರೆ. ಆದರೆ ಹಣ ನೀಡದ ಕಾರಣ ಇಲ್ಲಿಯವರೆಗೂ ಇಂಡೀಕರಣ ಮಾಡಿಲ್ಲ ಎಂದು ಉದಾಹರಣೆ ನೀಡಿದರು.


ಸುದ್ದಿಗೋಷ್ಟಿಯಲ್ಲಿ ದಲಿತ ಮುಖಂಡ ಹೆಚ್.ಕೆ. ಸಂದೇಶ್, ಕೆ.ಪಿ.ಆರ್.ಎಸ್. ಜಿಲ್ಲಾಧ್ಯಕ್ಷ ಹೆಚ್. ಆರ್. ನವೀನ್ ಕುಮಾರ್, ಡಿವೈಎಫ್ಐನ ಎಂ.ಜಿ. ಪೃಥ್ವಿ, ತೆಂಗು ಬೆಳೆಗಾರರ ಹೋರಾಟ ಸಮಿತಿಯ ರಾಮಚಂದ್ರ, ರವಿ ಇದ್ದರು.

# ದೇವಸ್ಥಾನದಲ್ಲೇ ನೇಣಿಗೆ ಕೊರಳೊಡ್ಡಿದ ಅರ್ಚಕ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಳೇಬೀಡು: ದೇವಾಲಯದಲ್ಲಿ ಅರ್ಚಕ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಗಂಗೂರು ಗ್ರಾಮದಲ್ಲಿ ನಡೆದಿದೆ.

ರಂಗಸ್ವಾಮಿ (65) ಮೃತ ಅರ್ಚಕ. ಕೆಲವು ಗ್ರಾಮಸ್ಥರು ಹಾಗೂ ಅರ್ಚಕರ ನಡುವೆ ವೈಮನಸ್ಸು ಉಂಟಾಗಿತ್ತು. ಹೀಗಾಗಿ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು



ಕುಟುಂಬದವರು ಹೇಳಿದರು.

ಅರ್ಚಕರು ಬಾಗಿಲಿನ ಬೋಲ್ಟ್ ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ನ್ಯಾಯ ದೊರಕುವ ವರೆಗೂ ದೇವಾಲಯದ ಬಾಗಿಲು ತೆರೆಯಲು ಬಿಡುವುದಿಲ್ಲ ಎಂದು ಕುಟುಂಬದವರು ದೇವಾಲಯದ ಜಗುಲಿಯಲ್ಲಿ ಪಟ್ಟು ಹಿಡಿದು ಕುಳಿತರು. ಮಧ್ಯಾಹ್ನ 1 ಗಂಟೆಗೆ ತಹಶೀಲ್ದಾರ್ ಮಮತಾ ಆಗಮಿಸಿ ಕುಟುಂಬದವರೊಂದಿಗೆ ಮಾತುಕತೆ ನಡೆಸಿದರು. ನಮಗೆ ನ್ಯಾಯ ದೊರಕುವ ವರೆಗೆ ದೇವಾಲಯದ ಬಾಗಿಲು ತೆರೆಯಲು ಬಿಡುವುದಿಲ್ಲ ಎಂದು ಕುಟುಂಬದವರು ಹಾಗೂ ಸಂಬಂಧಿಕರು ಪಟ್ಟು ಹಿಡಿದರು. ಸುದಿರ್ಘ ಮಾತುಕತೆಯ ನಂತರ ಬಾಗಿಲು ತೆಗೆದು ಮೃತ ದೇಹವನ್ನುಹೊರತರಲಾಯಿತು.

ಕುಟುಂಬಕ್ಕೆ ಪೊಲೀಸರಿಂದ ಭದ್ರತೆ ಕೊಡಿಸುತ್ತೇವೆ. ಘಟನೆ ಪರಿಶೀಲನೆ ನಡೆಸುತ್ತೇವೆ. ಶೀಘ್ರವೇ ಗ್ರಾಮದಲ್ಲಿ ಶಾಂತಿ ಕಾಪಾಡುವ ನಿಟ್ಟಿನಲ್ಲಿ ಸಭೆ ನಡೆಸಲಾಗುವುದು ಎಂದು ತಹಶೀಲ್ದಾರ್ ಭರವಸೆ ನೀಡಿದರು.

# ಗಾಂಜಾ ವ್ಯಸನಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ



ಸಕಲೇಶಪುರ: ತಾಲ್ಲೂಕಿನಲ್ಲಿ ಗಾಂಜಾ ವ್ಯಸನಿಗಳ ಸಂಖ್ಯೆ ಹೆಚ್ಚಾಗಿದ್ದು ಪೊಲೀಸರು ಕ್ರಮ ಕೈಗೊಳ್ಳದಿರುವುದರಿಂದ ಜನಸಾಮಾನ್ಯರು ಆತಂಕದಲ್ಲೇ ಬದುಕುವಂತಾಗಿದೆ ಎಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪಟ್ಟಣದ ಅಶೋಕ ರಸ್ತೆಯಲ್ಲಿರುವ ನಗರ ಠಾಣೆ ಮುಂಭಾಗ ಸೇರಿದ ಬಿಜೆಪಿ ಮುಖಂಡರು ಹಾಗೂ ಕ್ಯಾನಹಳ್ಳಿ ಗ್ರಾಮಸ್ಥರು ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ತಾಲ್ಲೂಕು ಅಧ್ಯಕ್ಷ ವಳಲಹಳ್ಳಿ ಅಶ್ವಥ್ ಮಾತನಾಡಿ, ತಾಲ್ಲೂಕಿನಲ್ಲಿ ಗಾಂಜಾ ಹಾಗೂ ಡ್ರಗ್ಸ್ ಹಾವಳಿ ವಿಪರೀತವಾಗಿದೆ. ಗಾಂಜಾ ವ್ಯಸನಿಗಳು ತಾಲ್ಲೂಕಿನ ಎಲ್ಲಾ ಭಾಗಗಳಲ್ಲೂ ಇದ್ದಾರೆ. ಕೆಲವು ಹೋಂ ಸ್ಟೇ ಹಾಗೂ ರೆಸಾರ್ಟ್‌ಗಳು ಗಾಂಜಾ ವ್ಯಸನಿಗಳ ಅಡ್ಡೆಯಾಗಿವೆ. ಗಾಂಜಾ ವ್ಯಸನದ ಜೊತೆಗೆ ಮದ್ಯಪಾನವನ್ನೂ ಮಾರಾಟ ಮಾಡುತ್ತಾರೆ. ಗಾಂಜಾ ವ್ಯಸನಿಗಳು ದಾಂಧಲೆ ಮಾಡುವಾಗ ಸಾರ್ವಜನಿಕರು ಅದನ್ನು ಕೇಳಲು ಹೋದರೆ ಮದ್ಯದ ಬಾಟಲಿಗಳನ್ನು ಒಡೆದು ಹೆದರಿಸುತ್ತಾರೆ. ಅದರಿಂದ ಸಾರ್ವಜನಿಕರು ಗಾಂಜಾ ವ್ಯಸನಿಗಳ ವಿರುದ್ಧ ದೂರು ನೀಡಲು ಹೆದರುವಂತಾಗಿದೆ ಎಂದರು.

ಕ್ಯಾನಹಳ್ಳಿ ಗ್ರಾಮದಲ್ಲಿ ಕೆಲವು ಗಾಂಜಾ ವ್ಯಸನಿಗಳು ಮದ್ಯದ ಬಾಟಲಿಗಳನ್ನು ಬಿಸಾಡಿದ್ದರು. ಅದನ್ನುಯುವಕ ಪ್ರಶ್ನಿಸಿದ್ದಕ್ಕೆ ಆತನ ಮೇಲೆ ಹಲ್ಲೆಗೆ ಯತ್ನ ನಡೆದಿದೆ. ಈ ಬಗ್ಗೆ ದೂರು ನೀಡಲು ಠಾಣೆಗೆ ತೆರಳಿದರೆ ಇಲ್ಲಿ ದೂರು ಸ್ವೀಕರಿಸುವುದಿಲ್ಲ, ಗ್ರಾಮಾಂತರ ಠಾಣೆಯಲ್ಲಿ ದೂರು ಕೊಡಿ ಎಂದಿದ್ದಾರೆ. ಹೀಗಾದರೆ ಪೊಲೀಸರ ಕರ್ತವ್ಯ ಏನು ಎಂದು ಪ್ರಶ್ನಿಸಿದರು.

ತಾಲ್ಲೂಕಿನಲ್ಲಿ ಗಾಂಜಾ ಹಾಗೂ ಡ್ರಗ್ಸ್ ಪೂರೈಕೆ ಸಂಪೂರ್ಣವಾಗಿ ನಿಲ್ಲಬೇಕು. ಗಾಂಜಾ ವ್ಯಸನಿಗಳ ವಿರುದ್ಧ ಪೊಲೀಸರು ಕಠಿಣ ಕ್ರಮ ಕೈಗೊಳ್ಳದಿದ್ದರೆ, ಮುಂದಾಗುವ ಅನಾಹುತಗಳಿಗೆ ಪೊಲೀಸ್ ಇಲಾಖೆಯೇ ಕಾರಣವಾಗುತ್ತದೆ ಎಂದರು.

ಬಿಜೆಪಿ ಮುಖಂಡರಾದ ಕ್ಯಾನಹಳ್ಳಿ ರಾಜ್‌ಕುಮಾರ್, ಬೆಳ್ಳಿ, ತಿರುಮಲ ಇತರರಿದ್ದರು.

# ವಿದ್ಯಾರ್ಥಿಗಳು ಸಮಯ ವ್ಯರ್ಥ ಮಾಡದೆ ವ್ಯಾಸಂಗ ಮಾಡಿ

## ಶಾಸಕ ಸಿ.ಎನ್. ಬಾಲಕೃಷ್ಣ ಸಲಹೆ | ಪ್ರತಿಭಾವಂತ ಮಕ್ಕಳಿಗೆ ಅಭಿನಂದನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ವಿದ್ಯಾರ್ಥಿಗಳು ಸಮಯವನ್ನು ಹಾಳು ಮಾಡಿಕೊಳ್ಳದೆ ನಿರಂತರ ಅಭ್ಯಾಸದ ಮೂಲಕ ಅಂದುಕೊಂಡ ಗುರಿ ಸಾಧಿಸಬೇಕು ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ 600ಕ್ಕೂ ಹೆಚ್ಚು ಅಂಕ ಪಡೆದ ಮಕ್ಕಳಿಗೆ ಅಭಿನಂದಿಸಿ ಮಾತನಾಡಿದರು.

ಕಲಿಯುವ ಸಮಯ ಯಾವಾಗ ಬೇಕಾದಾಗ ಸಿಗುವುದಿಲ್ಲ, ಮೊಬೈಲ್ ಗೀಳು ಅಂಟಿಸಿಕೊಳ್ಳುವುದು ಸರಿಯಲ್ಲ, ವರ್ಷವಿಡಿ ಚೆನ್ನಾಗಿ ಓದಬೇಕು. ವರ್ಷದ ಕೊನೆಯಲ್ಲಿ ಬರುವ ಪರೀಕ್ಷೆಗಳನ್ನು ವಿದ್ಯಾರ್ಥಿಗಳು ಸವಾಲಾಗಿ ಸ್ವೀಕರಿಸಿದಾಗ ಮಾತ್ರ ಗುರಿ ಮುಟ್ಟಲು ಸಾಧ್ಯ ಎಂದರು.

ತಾಲ್ಲೂಕಿನಲ್ಲಿ 2866 ವಿದ್ಯಾರ್ಥಿಗಳು ಎಸ್ಎಸ್ಎಲ್‌ಸಿ ಪರೀಕ್ಷೆ ಎದುರಿಸಿದ್ದು, 2200 ಮಕ್ಕಳು ತೇರ್ಗಡೆಯಾಗಿ ಶೇ.77ರಷ್ಟು ಫಲಿತಾಂಶ ದಾಖಲಾಗಿದೆ. ಸರ್ಕಾರಿ ಶಾಲೆಯಲ್ಲಿನ 84 ವಿದ್ಯಾರ್ಥಿಗಳು, ಅನುದಾನಿತ ಶಾಲೆಗಳ 7 ವಿದ್ಯಾರ್ಥಿಗಳು, ಅನುದಾನ ರಹಿತ ಶಾಲೆಯ 47 ವಿದ್ಯಾರ್ಥಿಗಳು ಎ ಪ್ಲಸ್‌ನಲ್ಲಿ ತೇರ್ಗಡೆ ಹೊಂದಿದ್ದು, ಅವರೆಲ್ಲರನ್ನೂ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಇಲಾಖೆಯಿಂದ ಅಭಿನಂದನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

75 ಮಕ್ಕಳಿಗೆ ನಡೆಸಿದ ವಿಜಯ ಸಂಕಲ್ಪ ಕಾರ್ಯಕ್ರಮದಲ್ಲಿ 51 ವಿದ್ಯಾರ್ಥಿಗಳು ಎ ಪ್ಲಸ್ ಫಲಿತಾಂಶ ಪಡೆದಿದ್ದಾರೆ. ಈ ಪೈಕಿ ಇಬ್ಬರು ವಿದ್ಯಾರ್ಥಿಗಳು ತಾಲ್ಲೂಕಿಗೆ ಪ್ರಥಮ ಮತ್ತು ದ್ವಿತೀಯ ಸ್ಥಾನ ಗಳಿಸಿದ ಹೆಗ್ಗಳಿಕೆ ಇದೆ. ಶಿಕ್ಷಣ ಸಚಿವರು ಪರೀಕ್ಷೆಗಳು ಶಿಸ್ತುಬದ್ಧವಾಗಿ ನಡೆಯಬೇಕು. ನೈಜ ಫಲಿತಾಂಶ ಹೊರಬರಬೇಕು ಎಂಬ ಆಶಯ ಹೊಂದಿದ್ದ ಪರಿಣಾಮ ರಾಜ್ಯದಲ್ಲಿ ಗುಣಾತ್ಮಕ ಫಲಿತಾಂಶ ಬಂದಿದೆ. ಅನುತ್ತೀರ್ಣ ಆದವರು ಧೃತಿಗೆಡುವುದು ಬೇಡ. ಮರು ಪರೀಕ್ಷೆಗಳಿಗೆ ಅವಕಾಶವಿದೆ, ಇದರಲ್ಲಿ ಸಫಲತೆ ಹೊಂದಬೇಕು ಎಂದರು.

ಪ್ರೌಢಶಾಲಾ ಶಿಕ್ಷಕರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ದೇವರಾಜೇಗೌಡ ಮಾತನಾಡಿ, ಸಿಬಿಎಸ್ಇ ಮತ್ತು ಐಸಿಎಸ್‌ಸಿ ತರಗತಿಗಳಲ್ಲಿ 100ಕ್ಕೆ 33 ಅಂಕಗಳಿಸಿದರೆ ಪಾಸ್ ಆಗುವ ವ್ಯವಸ್ಥೆ ಇದೆ. ರಾಜ್ಯ ಪಠ್ಯಕ್ರಮದ ಶಾಲೆಗಳಲ್ಲಿ ಆಂತರಿಕ ಮೌಲ್ಯಮಾಪನದಲ್ಲಿ 20ಕ್ಕೆ 20 ಅಂಕ ಪಡೆದು ಉಳಿದಂತೆ 80 ಅಂಕಗಳಿಗೆ 28 ಅಂಕ ಪಡೆದರೆ ಪಾಸ್ ಆಗಬಹುದು. ಈ ತಾರತಮ್ಯ ಹೋಗಲಾಡಿಸುವ ನಿಟ್ಟಿನಲ್ಲಿ ಶಾಸಕರು ವಿಧಾನಸಭೆಯಲ್ಲಿ ವಿಚಾರ ಮಂಡಿಸಿ ಮಂತ್ರಿಗಳ ಗಮನಕ್ಕೆ ತರಬೇಕು. ಅದೇ ರೀತಿ ಶಿಕ್ಷಕರಿಗೆ ಪರಿಹಾರ ಬೋಧನೆಗೆ ಸೂಚಿಸಿದ್ದು, ಶಿಕ್ಷಣ ಇಲಾಖೆ ರಜೆ ಸಹಿತ ಇಲಾಖೆ, ಬೇಸಿಗೆ ರಜೆ ಇರುವುದರಿಂದ ಶಿಕ್ಷಕರು ಬಹುತೇಕ ಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ. ನಮ್ಮ ಇಲಾಖೆಯನ್ನು ರಜೆ ರಹಿತ ಇಲಾಖೆ ಎಂದು ಘೋಷಿಸಿದರೆ ಸರ್ಕಾರದ ಸೌಲಭ್ಯ ಸಿಗುತ್ತದೆ. ಅದರಿಂದ ಪರ್ಯಾಯ ಬೋಧನೆಗೆ ಅನುಕೂಲವಾಗಲಿದೆ. ಈ ಕುರಿತಾಗಿ ಶಾಸಕರು ಸರ್ಕಾರದ ಗಮನಕ್ಕೆ ತರಬೇಕೆಂದು ಮನವಿ ಮಾಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಎನ್. ದೀಪಾ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಉಮಾಶಂಕರ್, ತಾಲ್ಲೂಕು ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್.ಜಿ. ಮಲ್ಲೇಶ್‌ಗೌಡ ಹಾಗೂ ಇತರರಿದ್ದರು.

# ಸ್ಪರ್ಧಾತ್ಮಕ ಪರೀಕ್ಷೆಗೆ ಆದ್ಯತೆ ನೀಡಲು ಸಲಹೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಿದರೆ ಬದುಕು ರೂಪಿಸಿಕೊಳ್ಳಲು ಸಹಾಯವಾಗುತ್ತದೆ ಎಂದು ಉದ್ಯಮಿ ಆನಂದಗೌಡ ಹೇಳಿದರು.

ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕರ್ನಾಟಕ ದಲಿತ ಸಮನ್ವಯ (ಮನುಜಮತ) ಸಮಿತಿ, ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಸಹಯೋಗದಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಾಪಾಡುವಲ್ಲಿ ಯುವ ಜನಾಂಗದ ಪಾತ್ರ ಕುರಿತು ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿ ಮಾತನಾಡಿದರು.

ವಿದ್ಯಾರ್ಥಿ ಜೀವನ ಪ್ರಮುಖ ಕಾಲಘಟ್ಟ, ಪಠ್ಯದ ಜತೆ ಪಠ್ಯೇತರ ಚಟುವಟಿಕೆಯಲ್ಲಿ ಭಾಗವಹಿಸಬೇಕು. ಗ್ರಂಥಾಲಯದ ಸದುಪಯೋಗಪಡಿಸಿಕೊಳ್ಳಬೇಕು. ಓದುವ ಹವ್ಯಾಸ ರೂಢಿಸಿಕೊಳ್ಳಬೇಕು. ಸ್ಪರ್ಧಾತ್ಮಕ ಪರೀಕ್ಷೆ ಜೀವನಕ್ಕೆ ಸೋಪಾನ. ಅನೇಕ ಕಂಪನಿಗಳಲ್ಲಿ ಉದ್ಯೋಗಾವಕಾಶ ಲಭ್ಯ ಇದೆ. ಅದಕ್ಕೆ ತಕ್ಕಂತೆ ಕೌಶಲ್ಯ ಇರಬೇಕು ಎಂದರು.

ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಎಸ್.ವಿ. ರುಚಿತಾ (ಪ್ರಥಮ), ಎಚ್.ಡಿ. ಮೋಹನ್ (ದ್ವಿತೀಯ), ಬಿ.ಆರ್. ಜಯಶ್ರೀ (ತೃತೀಯ) ಸಮಾಧಾನಕರ ಬಹುಮಾನ: ಎಂ.ವಿ. ಮಂಜುನಾಥ್ ಕೆ.ಎಲ್. ರಕ್ಷಿತಾ, ಚಂದನಶ್ರೀ, ಕೆ.ಎಂ. ಸಂಧ್ಯಾ, ಭವ್ಯಶ್ರೀ. ಸಿ.ಕೆ. ನೀತು. ಜೆ.ಎಲ್. ಸಹನಾ ಬಿ.ಆರ್. ಬಾಲು ಅವರಿಗೆ, ಬಹುಮಾನ ವಿತರಿಸಲಾಯಿತು.

ಪ್ರಬಂಧ ಸ್ಪರ್ಧೆಯಲ್ಲಿ 77 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಸಂಘಟನೆಯ ಜಿಲ್ಲಾ ಸಂಚಾಲಕ ಗೋವಿಂದರಾಜು ದಿಂಡಗೂರು, ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಆರ್.ಕೆ. ಶಿವಪ್ಪ ಮಾತನಾಡಿದರು.

# ಬೆಕ್ಕ ಪ್ರಕೃತಿ ವನಕ್ಕೆ ನಿಶ್ಚಲಾನಂದನಾಥ ಶ್ರೀ ಭೇಟಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಶ್ರವಣಬೆಳಗೊಳ: ಹೋಬಳಿಯ ಬೆಕ್ಕ ಗ್ರಾಮದಲ್ಲಿರುವ ತೀರ್ಥಂಕರರ ಪ್ರಕೃತಿಯ ವನಕ್ಕೆ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ನಿಶ್ಚಲಾನಂದನಾಥ ಸ್ವಾಮೀಜಿ ಭೇಟಿ ನೀಡಿ ಪ್ರಕೃತಿ ಮತ್ತು ಪರಿಸರ ನಿರ್ವಹಣೆ ಬಗ್ಗೆ ಸಂತಸ ವ್ಯಕ್ತಪಡಿಸಿದರು.

ರಾಜ್ಯ ಪ್ರಶಸ್ತಿ ಪುರಸ್ಕೃತ ಸಾವಯವ ಕೃಷಿಕ ಬೆಕ್ಕದ ಬಿ.ರಾಘವೇಂದ್ರ ಅವರು ಸ್ವಾಮೀಜಿಯನ್ನು ಸ್ವಾಗತಿಸಿ 20 ಎಕರೆಯ ತೆಂಗಿನ ತೋಟದಲ್ಲಿ ರಾಸಾಯನಿಕ ಬಳಸದೇ ಸಾವಯವ ಕೃಷಿಯನ್ನು ಮಾತ್ರ ಅವಲಂಬಿಸಿದೆ. ಇಲ್ಲಿ ಅನೇಕ ತರಹದ ಅಮೂಲ್ಯವಾದ ಆಯುರ್ವೇದ ಸಸ್ಯಗಳನ್ನು ಬೆಳೆಸಲಾಗಿದೆ ಎಂದು ಮಾಹಿತಿ ನೀಡಿದರು.

ಇಲ್ಲಿ ಕೃಷಿ ಹೊಂಡಗಳನ್ನು ನಿರ್ಮಿಸಿ ಮಳೆಗಾಲದಲ್ಲಿ ಬೀಳುವ ಮಳೆಯ ನೀರನ್ನು ಸಂಗ್ರಹಿಸಲಾಗುತ್ತದೆ. ಹಾಗಾಗಿ ಇಲ್ಲಿಯ ಪರಿಸರ ತಂಪಾಗಿದ್ದು, ತೆಂಗು, ಬಾಳೆ, ವಿವಿಧ ಜಾತಿಯ ಹಣ್ಣುಗಳ ಮತ್ತು ಔಷಧಿ ಸಸ್ಯಗಳನ್ನು ನಡೆಸಲಾಗಿದೆ. ಪ್ರಾಣಿ ಸಂಕುಲಕ್ಕೆ ಕುಡಿಯುವ ನೀರಿಗೆ ಇಲ್ಲಿ ಬಿಟ್ಟಿರುವ ಹಣ್ಣುಗಳನ್ನು ಮಾರದೇ ಪ್ರಾಣಿಗಳಿಗೇ ಬಿಡಲಾಗಿದೆ ಎಂದರು.

ಸ್ವಾಮೀಜಿಯು ತೀರ್ಥಂಕರರ ವನದಲ್ಲಿ ಸಂಪಿಗೆ ಸಸ್ಯಗಳನ್ನು ನಡೆಸಿದರು. ಜೈನ ಧರ್ಮದ 24 ತೀರ್ಥಂಕರರ ಹೆಸರಿನಲ್ಲಿರುವ ಸಸ್ಯಗಳನ್ನು ಸಂಗ್ರಹಿಸಿ ಬೆಳೆಸಿರುವುದನ್ನು ಶ್ಲಾಘಿಸಿದರು.

ಸಾಕಮ್ಮ ಬಸವೇಗೌಡ ಸೇವಾ ಸಂಜೀವಿನಿ ಟ್ರಸ್ಟ್ ವತಿಯಿಂದ ಸ್ವಾಮೀಜಿಯನ್ನು ಗೌರವಿಸಲಾಯಿತು.

# ಮಾನಸಿಕ ನೆಮ್ಮದಿಗೆ ದೇವಸ್ಥಾನಗಳು ಪೂರಕ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ನಿತ್ಯ ಜೀವನದ ಜಂಜಾಟದ ನಡುವೆ ಮನುಷ್ಯ ಧಾರ್ಮಿಕ ಚಿಂತನೆಗೆ ಪ್ರೇರಕವಾಗುವುದು ದೇವಾಲಯಗಳು. ದೇವಸ್ಥಾನಗಳಿಗೆ ಭೇಟಿ ನೀಡುವುದರಿಂದ ಮಾನಸಿಕ ನೆಮ್ಮದಿ ಪ್ರಾಪ್ತವಾಗುತ್ತದೆ ಎಂದು ಸುತ್ತೂರು ಮಹಾಸಂಸ್ಥಾನದ ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಹೇಳಿದರು.



ತಾಲ್ಲೂಕಿನ ದಾಳಗೌಡವನಹಳ್ಳಿ ಗ್ರಾಮದಲ್ಲಿ ಶ್ರೀ ಭೈರವದಾಳೇಶ್ವರ ದೇವಾಲಯ ಲೋಕಾರ್ಪಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ದೇವಾಲಯಗಳು ಶ್ರದ್ಧಾ ಕೇಂದ್ರಗಳು ಇದ್ದಂತೆ. ಮಾನಸಿಕ ನೆಮ್ಮದಿಗೆ ದೇವಾಲಯಗಳ ಅವಶ್ಯಕತೆ ಬಹಳವಾಗಿರುತ್ತದೆ. ಹೀಗೆ ಪೂಜೆ ಮಾಡಬೇಕು ಎನ್ನುವುದಕ್ಕಿಂತ ನಿರ್ಮಲ ಮನಸ್ಸಿನಿಂದ ಪೂಜಿಸುವುದು ಭಗವಂತನ ಅನುಗ್ರಹಕ್ಕೆ ಕಾರಣವಾಗುತ್ತದೆ. ದೇವರಿಗೆ ಭಕ್ತಿಯಷ್ಟೆ ಮುಖ್ಯ. ನಮಗೆ ಏನು ಬೇಕು ಎನ್ನುವುದನ್ನು ಭಗವಂತನಲ್ಲಿ ಪ್ರಾರ್ಥಿಸುವ ಅಗತ್ಯ ಇಲ್ಲ. ಭಗವಂತ ಮತ್ತು ಭಕ್ತನ ಸಂಬಂಧ ತಾಯಿ ಮಕ್ಕಳ ಸಂಬಂಧ ಇದ್ದಂತೆ. ಸರ್ವವ್ಯಾಪಿಯಾದ ಭಗವಂತನಿಗೆ ಎಲ್ಲವೂ ಗೊತ್ತಿದೆ. ಆದ್ದರಿಂದ ಯಾರಿಗೆ ಏನು ವರ ನೀಡಬೇಕೆಂಬುದು ಆತನಿಗೆ ತಿಳಿದಿದೆ. ಮನುಷ್ಯ ಸಹಜ ಏನೆಲ್ಲಾ ತಾಮಸ ಗುಣಗಳಿದ್ದರೂ ದೇವಾಲಯಕ್ಕೆ ಹೋದಾಗ ಎಲ್ಲವನ್ನೂ ಮರೆಯುವಂತೆ ಮಾಡುವ ಶಕ್ತಿ ದೇವಾಲಯಗಳಿಗೆ ಇವೆ ಎಂದರು.

ಮೈಸೂರಿನ ಕುಂದೂರು ಮಠದ ಡಾ. ಶರತ್ ಚಂದ್ರಸ್ವಾಮಿ ಮಾತನಾಡಿ, ಆಂತರಿಕ ಭಯ ನಾಶಪಡಿಸಲು ಭೈರವನ ಆರಾಧನೆ ಮಾಡಬೇಕಿದೆ. ದಾಳಗೌಡನಹಳ್ಳಿಯ ಜನತೆ ಇದರ ಮಹತ್ವವನ್ನು ಅರಿಯಬೇಕು. ಶಿವನ ಅವತಾರವೇ ಭೈರವ. ಕಾಶಿ ವಿಶ್ವನಾಥನ ದರ್ಶನ ಪಡೆದವರೂ ಸಹ ಕಾಲಭೈರವನ ಆರಾಧಿಸಿಯೇ ಹಿಂದಿರುಗಬೇಕು ಎಂಬ ಪುರಾಣ ಉಲ್ಲೇಖ ಇದೆ ಎಂದು ತಿಳಿಸಿದರು. ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ ಮಾತನಾಡಿ, ಇಂದಿನ ಸಮಾಜದಲ್ಲಿ ಯುವಕರು ಮೊಬೈಲ್ ಗೀಳಿಗೆ ಬಿದ್ದಿದ್ದಾರೆ. ಹೊರತಾಗಿ ದೇವಸ್ಥಾನಕ್ಕೆ ಹೋಗುವುದು ಒಂದು ಫ್ಯಾಷನ್ ಎಂದೇ ಪರಿಗಣಿಸುವವರಿದ್ದಾರೆ. ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರುಹೋಗುವ ಯುವಕರು ನಮ್ಮ ದೇಶದ ಸಂಸ್ಕೃತಿ ಮತ್ತು ಧಾರ್ಮಿಕತೆಯನ್ನು ಮೈಗೂಡಿಸಿಕೊಳ್ಳಬೇಕು. ಬಸವಣ್ಣನವರು ಹೇಳಿದಂತೆ ನಮ್ಮ ದೇಹವೇ ಒಂದು ದೇಗುಲ ನಮ್ಮೊಳಗಿರುವ ಆತ್ಮವೇ ದೇವರು. ದೇವಾಲಯದಲ್ಲಿರುವ ಪರಮಾತ್ಮನೊಂದಿಗೆ ವಿಲೀನವಾಗಬೇಕು. ಇದಕ್ಕೆ ಭಕ್ತಿ, ಶ್ರದ್ಧೆ ಬಹು ಮುಖ್ಯ ಎಂದು ತಿಳಿಸಿದರು. ಪೂರ್ಣ ಕಳಸದೊಂದಿಗೆ ಗ್ರಾಮದಲ್ಲಿ ದೇವರ ಉತ್ಸವ ಮಾಡಲಾಯಿತು. ಗರ್ಭಗುಡಿಯಲ್ಲಿನ ಮೂರ್ತಿಗೆ ಪ್ರಾಣ ಪ್ರತಿಷ್ಠಾಪನೆ ಹಾಗೂ ಗೋಪುರದ ಮೇಲಿನ ಕಳಸ ಸಂಪ್ರೋಕ್ಷಣೆ ನಡೆಸಲಾಯಿತು. ಸುತ್ತಮುತ್ತಲಿನ ಗ್ರಾಮಸ್ಥರಿಗೆ ಪ್ರಸಾದಾರ್ಥ ಅನ್ನ ಸಂತರ್ಪಣೆ ನಡೆಸಲಾಯಿತು.

ಅರಕಲಗೂಡು ದೊಡ್ಡಮಠದ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮೀಜಿ, ಮಲೆಮಹದೇಶ್ವರ ಬೆಟ್ಟದ ಸಾಲೂರು ಮಠದ ಡಾ. ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಬೆಂಗಳೂರಿನ ಖಾದಿ ಮತ್ತು ಗ್ರಾಮೋದ್ಯೋಗದ ಸಿಇಒ ಡಾ. ಡಿ.ಬಿ. ನಟೇಶ್, ಗ್ರಾಪಂ ಅಧ್ಯಕ್ಷ ಶಿವಣ್ಣ, ವೀರಶೈವ ಮುಖಂಡರಾದ ಡಿ.ಸಿ. ಮಹೇಶಪ್ಪ, ಸೋಮೇಶ್ ಉಪಸ್ಥಿತರಿದ್ದರು.

# ಪಠ್ಯೇತರ ಚಟುವಟಿಕೆಗಳಿಂದ ವ್ಯಕ್ತಿತ್ವ ವಿಕಸನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ವಿದ್ಯಾರ್ಥಿಗಳು ಪಠ್ಯ ಪುಸ್ತಕ ಅಧ್ಯಯನಕ್ಕೆ ಸೀಮಿತರಾಗದೆ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂದು ಸರ್ಕಾರಿ ವಿಜ್ಞಾನ ಕಾಲೇಜು ಪ್ರಾಂಶುಪಾಲ ಪ್ರಸನ್ನ ಕುಮಾರ್ ಹೇಳಿದರು.

ನಗರದ ಸರ್ಕಾರಿ ವಿಜ್ಞಾನ ಕಾಲೇಜು ಮೈದಾನದಲ್ಲಿ ಬೆಸ್ಟ್ ಪ್ರಥಮ ದರ್ಜೆ ಕಾಲೇಜು ವತಿಯಿಂದ ಹಮ್ಮಿಕೊಂಡಿದ್ದ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದರು.

ಸೋಲು ಗೆಲುವಿನ ಸೋಪಾನ, ಮಕ್ಕಳು ಆತ್ಮವಿಶ್ವಾಸದೊಂದಿಗೆ ಕ್ರೀಡೆಗಳಲ್ಲಿ ಭಾಗವಹಿಸಬೇಕು. ಜಗತ್ತಿನಲ್ಲಿ ಸಾಧ್ಯವಾಗದೆ ಇರುವುದು ಯಾವುದು ಇಲ್ಲ. ಹಾಗಾಗಿ ಯುವಕರು ಸಾಧಿಸುವ ಛಲವನ್ನು ಮೈಗೂಡಿಸಿಕೊಂಡರೆ ಏನನ್ನಾದರೂ ಸಾಧಿಸಬಹುದು. ವಿದ್ಯಾರ್ಥಿಗಳು ಚಟುವಟಿಕೆ, ಉತ್ಸಾಹದಿಂದ, ಶಿಸ್ತುಬದ್ಧ ಕಲಿಕೆಯಲ್ಲಿ ಪಾಲ್ಗೊಳ್ಳಬೇಕಾದರೆ ಶಾಲಾ ಕಾಲೇಜು ಹಂತದಲ್ಲಿ ಕ್ರೀಡೆಗಳಲ್ಲಿ ಭಾಗವಹಿಸುವುದು ಬಹಳ ಮುಖ್ಯ. ಕ್ರೀಡೆ ದೇಹದ ಆರೋಗ್ಯದ ಜೊತೆಗೆ ಮಾನಸಿಕವಾಗಿ ವಿದ್ಯಾರ್ಥಿಗಳನ್ನು ಸದೃಢಗೊಳಿಸುತ್ತದೆ ಎಂದು ಹೇಳಿದರು.

ಹಾಸನಾಂಬ ರೂರಲ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಮಂಜೇಗೌಡ ಮಾತನಾಡಿ, ಮಕ್ಕಳು ಹೆಚ್ಚು ಕ್ರೀಡೆಯಲ್ಲಿ ಭಾಗವಹಿಸುವುದರಿಂದ ಸೋಲು-ಗೆಲುವು ಎಂಬುದನ್ನು ಜೀವನ ಪಾಠವಾಗಿ ಸ್ವೀಕರಿಸಲು ಸಾಧ್ಯವಾಗುತ್ತದೆ. ಓದಿನ ಜೊತೆಗೆ ಕ್ರೀಡೆಯಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡು ಸಾಧನೆಯತ್ತ ಗಮನ ಹರಿಸಬೇಕು. ನಿರಂತರ ಶ್ರಮ ಹಾಗೂ ಏಕಾಗ್ರತೆಯಿಂದ ಕ್ರೀಡಾಭ್ಯಾಸದಲ್ಲಿ ತೊಡಗಿದರೆ ಏನನ್ನಾದರೂ ಸಾಧಿಸಲು ಸಾಧ್ಯವಿದೆ. ವಿದ್ಯೆ ನಮಗೆ ಉದ್ಯೋಗ ಪಡೆಯಲು ಸಹಾಯಕ ನಿಜ, ವಿದ್ಯೆಯೊಂದಿಗೆ ನಾವು ಕ್ರೀಡೆಯಲ್ಲೂ ತೊಡಗಿಸಿಕೊಳ್ಳುವ ಗುಣ ಬೆಳೆಸಿಕೊಳ್ಳಬೇಕು ಎಂದರು.

ಹಾಸನಾಂಬ ರೂರಲ್ ಎಜುಕೇಷನ್ ಟ್ರಸ್ಟ್ ಖಜಾಂಚಿ ಈಶ್ವರಪ್ಪ, ಬೆಸ್ಟ್ ಕಾಲೇಜಿನ ಆಡಳಿತಾಧಿಕಾರಿಗಳಾದ ಡಾ. ಬಿ. ವಿಕ್ರಂ, ಡಾ. ಎಂ.ಡಿ. ನಿತ್ಯಾನಂದ, ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಕೆ.ಸಿ. ನವೀನ್, ಬೆಸ್ಟ್ ಸ್ವತಂತ್ರ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಎಚ್.ಆರ್. ಮಧು, ಅಧ್ಯಾಪಕರಾದ ಅತೀತ್, ಮಹೇಶ್, ಪುನೀತ್, ರಮೇಶ್, ಸಚ್ಚಿನ್, ದೈಹಿಕ ಶಿಕ್ಷಣ ನಿರ್ದೇಶಕ ಮುರಳಿ ಹಾಗೂ ಇತರರು ಹಾಜರಿದ್ದರು.

# ಯಗಚಿ ನಾಲೆಗೆ ವೈದ್ಯಕೀಯ ತ್ಯಾಜ್ಯ: ಪರಿಶೀಲನೆ

ಬೇಲೂರು: ಪಶುಗಳಿಗೆ ನೀಡಿರುವ ಅಪಾಯಕಾರಿ ಇಂಜೆಕ್ಷನ್ ಸಿರಿಂಜ್, ಗ್ಲೂಕೋಸ್ ಸೇರಿ ಇತರೆ ವಸ್ತುಗಳನ್ನು ಪಟ್ಟಣದ ಹೊಸ ನಗರದ ಯಗಚಿ ನಾಲೆ ಸಮೀಪ ಹಾಕಿರುವುದನ್ನು ಪುರಸಭೆ ಆರೋಗ್ಯಾಧಿಕಾರಿ ಲೋಹಿತ್, ಸದಸ್ಯೆ ಮೀನಾಕ್ಷಿ ವೆಂಕಟೇಶ್ ಮತ್ತಿತರರು ಬುಧವಾರ ಪರಿಶೀಲಿಸಿದರು.

ಪುರಸಭೆ ಸದಸ್ಯೆ ಮೀನಾಕ್ಷಿ ವೆಂಕಟೇಶ್ ಮಾತನಾಡಿ, ಹೊಸ ನಗರದ



ಯಗಚಿ ನಾಲೆ ದಡದಲ್ಲಿ ಅಪಾಯಕಾರಿ ಅನುಪಯುಕ್ತ ವಸ್ತುಗಳನ್ನು ಹಾಕುವುದು ಸಾಮಾನ್ಯವಾಗಿದೆ. ಈಗ ಬಳಸಿರುವ ಅಪಾಯಕಾರಿ ಸಿರಿಂಜ್ ಸೇರಿ ಇನ್ನಿತರೆ ವಸ್ತುಗಳೊಂದಿಗೆ ಸ್ಥಳೀಯ ಅಮೃತ ವೆಟ್ ಫಾರ್ಮ್‌ವೊಂದರ ಚೀಟಿ ಸಿಕ್ಕಿದ್ದು, ಅವರೇ ತಂದು ಹಾಕಿರುವ ಶಂಕೆ ಇದೆ. ನಮ್ಮ ಅಧಿಕಾರಿಗಳು ಅವರ ವಿರುದ್ಧ ಕ್ರಮ ಕೈಗೊಳ್ಳಲಿದ್ದಾರೆ ಎಂದರು. ಪಶು ಇಲಾಖೆ ಸಹಾಯಕ ನಿರ್ದೇಶಕ ಸದಾಶಿವಮೂರ್ತಿ ಮಾತನಾಡಿ, ಹೊಸ ನಗರದಲ್ಲಿ ಸಿಕ್ಕಿರುವ ಸಿರಿಂಜ್‌ಗಳು ನಮ್ಮ ಇಲಾಖೆಯವರು ಬಳಸಿದವುಗಳಲ್ಲ. ನಾವು ಬಳಸಿದ ಸಿರಿಂಜ್‌ಗಳನ್ನು ಬಯೋ ಮೆಡಿಕಲ್ ವೇಸ್ಟೇಜ್‌ಗೆ ಕೊಡುತ್ತೇವೆ ಎಂದರು.

# ಆಪರೇಷನ್ ಸಿಂಧೂರ: ಕಾಂಗ್ರೆಸ್ ಸಂಭ್ರಮ



ಸಕಲೇಶಪುರ: ಭಾರತೀಯ ಸೇನೆಯ ಆಪರೇಷನ್ ಸಿಂದೂರ ಯಶಸ್ವಿಯಾಗಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಸಕಲೇಶಪುರದ ಹಳೆ ಬಸ್ ನಿಲ್ದಾಣದಲ್ಲಿ ಗುರುವಾರ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಾಚರಿಸಿದರು.

ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಮುರಳಿ ಮೋಹನ್ ಮಾತನಾಡಿ,

ಭಾರತದ ವೀರ ಸೈನಿಕರು ದೇಶದ ಗಡಿ ರಕ್ಷಿಸಲು ತ್ಯಾಗಮಯ ಸೇವೆ ಸಲ್ಲಿಸುತ್ತಿದ್ದಾರೆ. ಆಪರೇಷನ್ ಸಿಂದೂರ ಗೌರವದ ಸಂಕೇತವಾಗಿದೆ. ನಾವು ಈ ಸಂಭ್ರಮದಲ್ಲಿ ಪಾಲ್ಗೊಳ್ಳುವುದು ಸೈನಿಕರ ಶೌರ್ಯಕ್ಕೆ ಮೆಚ್ಚುಗೆ ಸೂಚಿಸುವುದಕ್ಕಾಗಿ ಎಂದರು

ಪುರಸಭೆ ಮಾಜಿ ಅಧ್ಯಕ್ಷ ಸೈಯದ್ ಮುಫೀಜ್, ಕೆಪಿಸಿಸಿ ಸದಸ್ಯ ಕೊಳ್ಳಹಳ್ಳಿ ಸಲೀಂ, ಮಹಿಳಾ ಘಟಕದ ಅಧ್ಯಕ್ಷೆ ಅನ್ನಪೂರ್ಣ, ಅಲ್ಪಸಂಖ್ಯಾತರ ಘಟಕ ತಾಲ್ಲೂಕು ಅಧ್ಯಕ್ಷ ಮೊಹಮ್ಮದ್ ಹನೀಫ್, ವಿಜಯ್ ಕುಮಾರ್, ಗೊದ್ದು ಲೋಕೇಶ್, ಬೈಕೆರೆ ದೇವರಾಜ್ ಇತರರಿದ್ದರು.

# ಇತಿಹಾಸದಲ್ಲಿ ಈ ದಿನ

## ಮೇ -9

**1502:** ಕ್ರಿಸ್ಟೋಫರ್ ಕೊಲಂಬಸ್ ತನ್ನ ನಾಲ್ಕನೇ ಮತ್ತು ಕೊನೆಯ ಸಮುದ್ರಯಾನದ ಆರಂಭ ಮಾಡಿದನು.

**1877:** ಭಾರತದಲ್ಲಿ ಬ್ರಿಟಿಷ್ ರಾಜಕೀಯ ನಿಯಂತ್ರಣ ಸ್ಥಾಪನೆಯ ನಂತರ ವಿಕ್ಟೋರಿಯಾ ರಾಣಿ ಬ್ರಿಟನ್‌ನ ಅಭಾರತದ ಸಿಂಹಾಸನದ ಸಾಮ್ರಾಜ್ಞಿಟಿ ಎಂಬ ಪಟ್ಟ ಧರಿಸಿದರು.

**1950:** ರಾಬರ್ಟ್ ಶ್ಯೂಮಾನ್ ತನ್ನ ಶ್ಯುಮಾನ್ ಘೋಷಣೆಯ ಮೂಲಕ ಯುರೋಪಿಯನ್ ಒಕ್ಕೂಟದ ಆಧಾರಶಿಲೆಯನ್ನು ಸ್ಥಾಪಿಸಿದರು.

**1974:** ಭಾರತದಲ್ಲಿ ಮೊದಲ ಪರ್ವತಾರೋಹಿಣಿ ಮಹಿಳೆ ಬಹುಘುಳಿ ಬಚ್ಚೆಂದ್ರಿ ಪಾಲ್ ಎವರೆಸ್ಟ್ ಶಿಖರವನ್ನು ಅಲಂಕರಿಸಿದ ದಿನ.

**1994:** ನೆಲ್ಸನ್ ಮಂಡೇಲಾ ದಕ್ಷಿಣ ಆಫ್ರಿಕಾದ ಮೊದಲ ಕಪ್ಪಣ್ಣ ರಾಷ್ಟ್ರಪತಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.

### ಜನನ

**1800:** ಜಾನ್ ಬ್ರೌನ್, ಅಮೆರಿಕದ ದಾಸ್ಯವಿರೋಧಿ ಕ್ರಾಂತಿಕಾರಿ.

**1860:** ಜೇಮ್ಸ್ ಬಾರೀ, ಪೀಟರ್ ಪ್ಯಾನ್ ಕಥೆಗಳ ರಚನೆಕಾರ.

**1901:** ಬ್ರೊಡರಿಕ್ ಕ್ರಾವ್‌ಲೆ, ಪ್ರಸಿದ್ಧ ಇಂಗ್ಲಿಷ್ ಸೇನಾಧಿಕಾರಿ.

**1949:** ಬಿಲಿ ಜೆಲ್, ಪ್ರಸಿದ್ಧ ಅಮೆರಿಕನ್ ಗಾಯಕ ಮತ್ತು ಸಂಗೀತಗಾರ.

### ಮರಣ

**1805:** ಫ್ರೇಡ್ರಿಕ್ ಶಿಲ್ಲರ್, ಪ್ರಸಿದ್ಧ ಜರ್ಮನ್ ನಾಟಕಕಾರ.

**1880:** ಗೈ ಡಿ ಮಾಪಾಸಾಂಟ್, ಫ್ರೆಂಚ್ ಲೇಖಕ.

**1978:** ಅಲ್ಡೋ ಮೊರೋ, ಇಟಲಿಯ ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದ್ದ ರಾಜಕಾರಣಿ, ಅಪಹರಣಗೊಂಡು ಹತ್ಯೆಗೊಳಗಾದರು.

# ಜಮೀನು ವ್ಯಾಜ್ಯ: ಮಾರಣಾಂತಿಕ ಹಲ್ಲೆ

ಅರಸೀಕೆರೆ: ಜಮೀನು ವಿಚಾರವಾಗಿ ಎರಡು ಕುಟುಂಬಗಳ ನಡುವೆ ಗಲಾಟೆ ನಡೆದಿದ್ದು ಇಬ್ಬರ ಮೇಲೆ ಮಚ್ಚು ಹಾಗೂ ದೊಣ್ಣೆಯಿಂದ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ಮತ್ತಿಹಳ್ಳಿಕೊಪ್ಪಲು ಗ್ರಾಮದಲ್ಲಿ ಮೇ 5 ರಂದು ನಡೆದಿದೆ.

ಗ್ರಾಮದ ಮಂಜಶೆಟ್ಟಿ ಹಾಗೂ ಸಹೋದರ ಕುಮಾರ್ ಮೇಲೆ ಅದೇ ಗ್ರಾಮದ ಬೂದೇಶ, ಮಂಜುಳಾ, ರವಿ, ಮಹಾಲಕ್ಷ್ಮಿ ಹಾಗೂ ಮಂಗಳಾ ಎಂಬುವವರು ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ.

ಕುಮಾರ್ ಅವರ ತಂದೆ ಶಂಕರಶೆಟ್ಟಿ ಅವರು ನಿಂಗರಾಜಶೆಟ್ಟಿ ಅವರ ಸರ್ವೆ ನಂ. 106ರ 1 ಎಕರೆ 35 ಗುಂಟೆ ಜಮೀನನ್ನು 2004ರಲ್ಲಿ 2 ಲಕ್ಷ ರೂ.ಗೆ ಕ್ರಯಕ್ಕೆ ಪಡೆದುಕೊಂಡಿದ್ದಾರೆ. ನಿಂಗರಾಜಶೆಟ್ಟಿ ಜಮೀನು ದುರಸ್ತಿಯಾದ ಬಳಿಕ ರಿಜಿಸ್ಟರ್ ಮಾಡಿಕೊಡುವುದಾಗಿ ತಿಳಿಸಿದ್ದರು.

ಶಂಕರಶೆಟ್ಟಿ ಅವರ ಕುಟುಂಬಸ್ಥರೇ ಜಮೀನು ಉಳುಮೆ ಮಾಡಿಕೊಂಡಿದ್ದಾರೆ. ನಿಂಗರಾಜಶೆಟ್ಟಿ ಮಗ ಬೂದೇಶನು ಭೂಮಿ ಬಿಟ್ಟುಕೊಡಬೇಕೆಂದು ಪಟ್ಟು ಹಿಡಿದಿದ್ದ. ಈ ಸಂಬಂಧ ಗಂಡಸಿ ಠಾಣೆಗೆ ದೂರು ನೀಡಿದ್ದ. ಸಿವಿಲ್ ವ್ಯಾಜ್ಯವಾಗಿರುವುದರಿಂದ ನ್ಯಾಯಾಲಯದಲ್ಲೇ ಪ್ರಕರಣ ಬಗೆಹರಿಸಿಕೊಳ್ಳಿರಿ ಎಂದು ಪೊಲೀಸರು ತಿಳಿಸಿದ್ದರು.

ಮೇ 5 ರಂದು ಮಧ್ಯಾಹ್ನ ಮಂಜಶೆಟ್ಟಿ ಹಾಗೂ ಕುಮಾರ್ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಅಲ್ಲಿಗೆ ಬಂದ ನಿಂಗರಾಜಶೆಟ್ಟಿ ಅವರ ಹೆಂಡತಿ ಮಂಜುಳಾ ಹಾಗು ಮಕ್ಕಳಾದ ರವಿ, ಬೂದೇಶ, ಮಹಾಲಕ್ಷ್ಮಿ, ಮಂಗಳಾ ಅವರು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಜಗಳ ಶುರು ಮಾಡಿದ್ದಾರೆ. ಈ ವೇಳೆ ಬೂದೇಶನು ಜೊತೆಗೆ ತಂದಿದ್ದ ಖಾರದ ಪುಡಿಯಿಂದ ಇಬ್ಬರಿಗೂ ಎರಚಿ ಮಚ್ಚಿನಿಂದ ಮಂಜಶೆಟ್ಟಿ ತಲೆಗೆ ಇರಿದಿದ್ದಾನೆ. ಅಲ್ಲಿಯೇ ನಿಂತಿದ್ದ ಕುಮಾರ್ ಅವರ ಮೇಲೆ ದೊಣ್ಣೆಯಿಂದ ಹಲ್ಲೆ ನಡೆಸಲಾಗಿದೆ. ಮಹಿಳೆಯರು ಸಹ ಖಾರದ ಪುಡಿ ಎರಚಿ ಹಲ್ಲೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ. ಗಲಾಟೆ ಜೋರಾಗುತ್ತಿದ್ದಂತೆ ಅಕ್ಕಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದವರು ದೌಡಾಯಿಸಿ ಜಗಳ ಬಿಡಿಸಿದ್ದಾರೆ. ಗಾಯಾಳನ್ನು ಹಿಮ್ಸ್‌ಗೆ ದಾಖಲಿಸಲಾಗಿದೆ. ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಪ್ರತ್ಯೇಕ ಅಪಘಾತ: ಇಬ್ಬರ ಸಾವು

ಹಾಸನ: ಶಾಂತಿಗ್ರಾಮ ಹಾಗೂ ಹಳೇಬೀಡು ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ರಸ್ತೆ ದಾಟುತ್ತಿದ್ದಾಗ ಕಾರು ಡಿಕ್ಕಿಯಾಗಿ ಪಾದಚಾರಿ ಮೃತಪಟ್ಟಿರುವ ಘಟನೆ ರಾಷ್ಟ್ರೀಯ ಹೆದ್ದಾರಿ 75ರ ಅದ್ದಿಹಳ್ಳಿ ಗೇಟ್ ಹತ್ತಿರ ಬುಧವಾರ ನಡೆದಿದೆ.

ಅದ್ದಿಹಳ್ಳಿ ಗ್ರಾಮದ ಪುಟ್ಟಸ್ವಾಮಿ ಮೃತರು. ರಸ್ತೆ ದಾಟುತ್ತಿದ್ದಾಗ ಚನ್ನರಾಯಪಟ್ಟಣ ಕಡೆಯಿಂದ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದೆ. ಶಾಂತಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮತ್ತೊಂದು ಪ್ರಕರಣದಲ್ಲಿ ಲಾರಿಯಲ್ಲಿ ತುಂಬಿದ್ದ ರಾಗಿ ಚೀಲಗಳನ್ನು ಬಿಗಿಯಾಗಿ ಕಟ್ಟುತ್ತಿದ್ದಾಗ ಆಕಸ್ಮಿಕವಾಗಿ ಕಾಲು ಜಾರಿ ಕೆಳಗೆ ಬಿದ್ದ ಚಾಲಕ ಮೃತಪಟ್ಟಿರುವ ಘಟನೆ ಬೇಲೂರು ತಾಲ್ಲೂಕಿನ ಹಗರೆ ಸಮೀಪ ನಡೆದಿದೆ.

ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕು ಬಾನುವಳ್ಳಿ ಗ್ರಾಮದ ಪ್ರಕಾಶ್ ಮೃತರು. ರಾಗಿ ತುಂಬಿಕೊಂಡು ದಾವಣಗೆ ಕಡೆಗೆ ತೆರಳುತ್ತಿದ್ದ ಹಗರೆಯ ಹೇಮಾ ಟ್ರೇಡರ್ಸ್ ಔಷಧಿ ಅಂಗಡಿ ಬಳಿ ಚೀಲಗಳನ್ನು ಬಿಗಿಯಾಗಿ ಕಟ್ಟುತ್ತಿದ್ದಾಗ ಕಾಲು ಜಾರಿ ಕೆಳಗೆ ಬಿದ್ದಿದ್ದಾರೆ. ಸ್ಥಳೀಯರು ತಕ್ಷಣವೇ ಆ್ಯಂಬುಲೆನ್ಸ್ ಮೂಲಕ ಪ್ರಕಾಶ್ ಅವರನ್ನು ಹಿಮ್ಸ್‌ಗೆ ದಾಖಲಿಸಿದರು. ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಹಳೇಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ನರಸೀಪುರ ಭೋವಿ ಕಾಲನಿಯಲ್ಲಿ ಕಂದಾಯ ಇಲಾಖೆಯಿಂದ ಮನೆ ಅಳತೆ



ಹಳೇಬೀಡು: ನರಸೀಪುರ ಭೋವಿ ಕಾಲನಿ ಕಂದಾಯ ಗ್ರಾಮವಾಗಿ ಮಾರ್ಪಡುತ್ತಿರುವ ಹಿನ್ನೆಲೆಯಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು ಮನೆಗಳ ಅಳತೆ ಕಾರ್ಯ ನಡೆಸಿದರು.

ಬೇಲೂರು ತಹಶೀಲ್ದಾರ್ ಮಮತ ಸೂಚನೆಯಂತೆ ಕಂದಾಯ ಸಿಬ್ಬಂದಿ ಮನೆಗಳ ಅಳತೆ ಮಾಡಿದರು. ವ್ಯವಸ್ಥಿತವಾದ ಒಳ ರಸ್ತೆ, ಚರಂಡಿ ಇಲ್ಲದ ಕಿಷ್ಕಿಂದೆಯಾದ ಭೋವಿ ಕಾಲನಿ ಬೀದಿಗಳಲ್ಲಿ ಸಿಬ್ಬಂದಿ ಕಷ್ಟಪಟ್ಟು ಅಳತೆ ಕಾರ್ಯ ನಿರ್ವಹಿಸಿದ್ದು ಕಂಡುಬಂತು. ಗ್ರಾಮಕ್ಕೆ ಸೌಲಭ್ಯ ಹರಿದು ಬರಬಹುದು ಎಂಬ ನಿರೀಕ್ಷೆಯಲ್ಲಿ ಕೆಲವರು ಸಿಬ್ಬಂದಿ ಜೊತೆ ಓಡಾಡಿದರು. ಮನೆಯ ಯಜಮಾನನ ಹೆಸರು ಎಷ್ಟು ಮಂದಿ ವಾಸವಾಗಿದ್ದಾರೆ ಎಂಬ ಮಾಹಿತಿ ಸಂಗ್ರಹಿಸಿದ್ದರಿಂದ ಕೆಲವರು ಸರ್ಕಾರದಿಂದ ಪರಿಹಾರ ಬರಬಹುದು ಎಂಬ ನಿರೀಕ್ಷೆಯಲ್ಲಿದ್ದರು.

ನರಸೀಪುರ ಭೋವಿ ಕಾಲನಿಯನ್ನು ಕಂದಾಯ ಗ್ರಾಮ ಮಾಡಬೇಕು ಎಂದು ಬೇಲೂರು ತಹಶೀಲ್ದಾರ್ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಗೆ ಸರ್ಕಾರದಿಂದ ಅನುಮೋದನೆ ದೊರಕಿದೆ. ಈ ಹಿನ್ನೆಲೆಯಲ್ಲಿ ತಹಶಿಲ್ದಾರ್ ಮನೆಗಳು ಅಳತೆ ಹಾಗೂ ಗ್ರಾಮದ ಕುರಿತು ಮಾಹಿತಿ ಸಂಗ್ರಹಿಸಲು ಸೂಚನೆ ನೀಡಿದ್ದರಿಂದ ಕಾರ್ಯಪ್ರವೃತ್ತರಾಗಿದ್ದೇವೆ ಎಂದು ಗ್ರಾಮ ಆಡಳಿತ ಅಧಿಕಾರಿ ರವಿಕುಮಾರ್ ತಿಳಿಸಿದರು.

ಗ್ರಾಮ ಆಡಳಿತ ಅಧಿಕಾರಿ ಪೂರ್ಣಿಮಾ, ಗ್ರಾಮ ಸಹಾಯಕಿ ಲತಾ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248